**O.S. No. 247/2014**
**PW-2**

ದಿನಾಂಕ: 14-09-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀಸವಾಲು ಪ್ರತಿವಾದಿ ಪರ ಶ್ರೀ ಸಿ.ಎಸ್.ಎಸ್.. ವಕೀಲರಿಂದಃ</u>

ಈಗ್ಗೆ 15 ವರ್ಷಗಳಿಂದ ಕಂಪಲಾಪುರದಲ್ಲಿ ವಾಸವಾಗಿದ್ದೇನೆ. ನನ್ನ ವಯಸ್ಸು ಎಷ್ಟು ಎಂದು ನನಗೆ ಗೊತ್ತಿಲ್ಲ. ನೀವು ನ್ಯಾಯಾಲಯದಲ್ಲಿ ಏನು ಹೇಳಲು ಬಂದ್ದೀರಿ ಎಂದರೆ ಸಾಕ್ಷಿ ಜಮೀನಿನ ಸಲುವಾಗಿ ಹೇಳಲು ಬಂದಿದ್ದೇನೆ. ನಾನು ನ್ಯಾಯಾಲಯ ಕ್ಕೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ, ಅದರಲ್ಲಿ ಇಷ್ಟು ಎಕರೆ ಜಮೀನು ಹಾಗೂ ಅಣ್ಣಯ್ಯ ಎಂದು ನಮೂದಿದೆ. ಅದನ್ನು ಹೊರತುಪಡಿಸಿ ಇನ್ನೇನೂ ಬರೆದಿಲ್ಲ. ಪ್ರಮಾಣ ಪತ್ರ ದಲ್ಲಿ 3 ಎಕರೆ ಜಮೀನು ಎಂದು ಬರೆಸಿರುತ್ತೇನೆ. ವಾದಿ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಹೇಳಿ ಬರೆಸಿರುತ್ತಾರೆ. ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿರುವ ಅಂಶಗಳನ್ನು ವಾದಿಗೆ ಹೇಳಿರುತ್ತೇನೆ. ಪ್ರತಿವಾದಿ ಅಣ್ಣಯ್ಯನ ಮಗಳು. ಪ್ರತಿವಾದಿ ಗಂಡನ ಹೆಸರು ಅಮಾಸೆ. ಅಮಾಸೆ ಹಾಗೂ ಪ್ರತಿವಾದಿಗೆ ಒಬ್ಬ ಗಂಡು, ಎರಡು ಹೆಣ್ಣು ಮಕ್ಕಳು. ಈಗ್ಗೆ 7-8 ವರ್ಷಗಳ ಹಿಂದೆ ಪ್ರತಿವಾದಿ ತಂದೆ ಅಣಣ್ಣಯ್ಯ ಮೈಸೂರಿನಲ್ಲಿ ತೀರಿಕೊಂಡಿರುತ್ತಾರೆ. ಅಣ್ಣಯ್ಯ ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ಹುಷಾರಿಲ್ಲದೇ ತೀರಿಕೊಂಡಿರುತ್ತಾರೆ. ಅಣ್ಣಯ್ಯ ತಿಲರಿಕೊಳ್ಳುವ ಕಾಲಕ್ಕೆ ನವು ಅವರೊಂದಿಗೆ ಆಸ್ಪತ್ರೆಯಲ್ಲಿದ್ದೆ. ಯಾವ ತಾರೀಖು, ತಿಂಗಳು, ಇಸವಿಯೆಂದು ಅಣ್ಣಯ್ಯ ತೀರಿಕೊಂಡರು ಎಂದು ಹೇಳಲು ಆಗುವುದಿಲ್ಲ.

ಪ್ರತಿವಾದಿ ಮತ್ತು ಆಕೆಯ ಮಕ್ಕಳು ಅಣ್ಣಯೊಂದಿಗೆ ವಿಶ್ವಾಸದಿಂದ ಇದ್ದರು ಎಂದರೆ ಸರಿ. ಅಣ್ಣಯ್ಯನ ಆಸ್ತಿ ಅವರ ಮಕ್ಕಳಿಗೆ ಸೇರುತ್ತದೆ ಎಂದರೆ ಸರಿ. ಅಣ್ಣಯ್ಯ ತೀರಿಹೋದ ನಂತರ ಅಣ್ಣಯ್ಯನ ಶವಸಂಸ್ಕಾರವನ್ನು ಪ್ರತಿವಾದಿ ಮತ್ತು ಅವರ ಮಕ್ಕಳು ಮಾಡಿರುತ್ತಾರೆ ಎಂದರೆ ಸಾಕ್ಷಿವಾದಿ ಮಾಡಿರುತ್ತಾರೆ ಎನ್ನುತ್ತಾರೆ. ಇಂದು ನ್ಯಾಯಾಲಯಕ್ಕೆ ವಾದಿ ಕರೆ ತಂದಿರುತ್ತಾರೆ ಎಂದರೆ ಸರಿ. ಅಣ್ಣಯ್ಯ ಮರಣಹೊಂದುವ ಪೂರ್ವದಲ್ಲಿ ಪ್ರತಿವಾದಿ ಮತ್ತು ಅವರ ಮಕ್ಕಳೊಂದಿಗೆ ಜಗಳ ಮತ್ತು ಹೊಡೆದಾಟ ಆಗಿತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ವಾದಿ ದಾವಾ ಆಸ್ತಿಯನ್ನು ತನ್ನ ಹೆಸರಿಗೆ ದಾಖಲು ಮಾಡಿಕೊಡುವಂತೆ ನಾಡಕಛೇರಿ ರಾವಂದೂರಿಗೆ ಅರ್ಜಿ ನೀಡಿದ್ದರು ಎಂದರೆ ಸರಿ. ಮೃತ ಅಣ್ಣಯ್ಯ ನಿಗೆ ಮಗಳು ಇರುವುದರಿಂದ ವಾದಿಯ ಹೆಸರಿಗೆ ಖಾತೆ ಮಾಡಲು ಬರುವುದಿಲ್ಲ ಎಂದು ವಿಲೇ

ಮಾಡಿದರು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಅಣ್ಣಯ್ಯ ಯಾವುದಾದರೂ ದಾಖಲೆ ಬರೆದ ವಿಚಾರ ಗೊತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ನೀವು ಅಣ್ಣಯ್ಯನೊಂದಿಗೆ ಕಂಪಲಾಪುರ ಗ್ರಾಮ ಬಿಟ್ಟು ಹೊರಗಡೆ ಹೋಗಿಲ್ಲ ಎಂದರೆ ಸರಿ. ನೀವು ಯಾವುದೇ ಕಛೇರಿಯಲ್ಲಿ ನಿಮ್ಮ ಹೆಬ್ಬೆಟ್ಟು ಗುರುತು ಹಾಕಿಲ್ಲ ಎಂದರೆ ಸರಿ. ಇಂದು ನ್ಯಾಯಾಲಯ ಕ್ಕೆ ನಾನು ಏತಕ್ಕೆ ಬಂದಿದ್ದೇನೆ ಎಂದು ನಿಮಗೆ ಗೊತ್ತಿಲ್ಲ ಎಂದರೆ ಸರಿ. ವಾದಿ ತಾನು ಹೇಳಿದಂತೆ ನ್ಯಾಯಾಲಯ ದಲ್ಲಿ ಹೇಳುವಂತೆ ನಿಮ್ಮನ್ನು ನ್ಯಾಯಾಲಯ ಕ್ಕೆ ಕರೆ ತಂದಿದ್ದರಿಂದ ನೀವು ನ್ಯಾಯಾಲಯ ಕ್ಕೆ ಬಂದಿರುತ್ತಾರೆ ಎಂದರೆ ಸರಿ.

ಮರುವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.